# ದಾವಣಗೆರೆ ಜಿಲ್ಲೆಯಲ್ಲಿ ಸ್ವದೇಶಿ ಚಳುವಳಿಯ ಪ್ರಮುಖ ನೇತಾರರು

**ಗಂಗಾಧರ ಪಿ.ಆರ್.**

ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಇತಿಹಾಸ ಅಧ್ಯಯನ ವಿಭಾಗ, ಸಿ.ಜಿ. ಬೆಲ್ಲದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಕ್ಕಿಆಲೂರು.

DOI: https://doi.org/10.5281/zenodo.17411481

## ABSTRACT:

ಬಂಗಾಳ ವಿಭಜನೆಯಿಂದ ಪ್ರೇರಿತವಾದ ಸ್ವದೇಶಿ ಚಳುವಳಿಯು ಕರ್ನಾಟಕದಾದ್ಯಂತ ಹರಡಿ, ದಾವಣಗೆರೆ ಜಿಲ್ಲೆಯಲ್ಲಿ ತೀವ್ರ ಸ್ವರೂಪ ಪಡೆಯಿತು. ಈ ಲೇಖನವು ದಾವಣಗೆರೆ ಜಿಲ್ಲೆಯಲ್ಲಿ ಸ್ವದೇಶಿ ಚಳುವಳಿಯನ್ನು ಮುನ್ನಡೆಸಿದ ಪ್ರಮುಖ ನೇತಾರರ ಪಾತ್ರ ಮತ್ತು ಕೊಡುಗೆಗಳನ್ನು ಚರ್ಚಿಸುತ್ತದೆ. ಹರ್ಡೆಕರ ಮಂಜಪ್ಪನವರ “ಧನುರ್ಧಾರಿ” ಪತ್ರಿಕೆಯ ಪ್ರಭಾವ, ಖಾದಿ ಪ್ರಚಾರ ಮತ್ತು ವಿದೇಶಿ ವಸ್ತುಗಳ ಬಹಿಷ್ಕಾರ ಮುಖ್ಯ ಚಟುವಟಿಕೆಗಳಾಗಿದ್ದವು. ಕೊಟಿಗಿ ಸಿದ್ಧಲಿಂಗಪ್ಪ, ಬಳ್ಳಾರಿ ಸಿದ್ದಮ್ಮ, ಖಾದಿ ಸಿದ್ದಪ್ಪ, ಕಾಸಲ ಶ್ರೀನಿವಾಸ ಶೆಟ್ಟಿ, ಮಾಗಾನಹಳ್ಳಿ ಬಸವರಾಜಪ್ಪ ಮತ್ತು ಇಜಾರಿ ವಸುಪಾಲಪ್ಪ ಪ್ರಮುಖ ನಾಯಕರು. ಇವರು ಅರಣ್ಯ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿಗಳಲ್ಲೂ ಭಾಗವಹಿಸಿದರು. ಮುಖ್ಯವಾಗಿ ಬಳ್ಳಾರಿ ಸಿದ್ದಮ್ಮನವರ ನಾಯಕತ್ವದಲ್ಲಿ ಚಳುವಳಿ ತೀವ್ರಗೊಂಡು, ಜಿಲ್ಲೆಯಾದ್ಯಂತ ಸ್ವಾತಂತ್ರ್ಯದ ಉತ್ಸಾಹ ಮತ್ತು ಗಾಂಧೀಜಿಯವರ ತತ್ವಗಳ ಪ್ರಚಾರಕ್ಕೆ ನಾಂದಿಯಾಯಿತು.

## KEYWORDS:

ಸ್ವದೇಶಿ ಚಳುವಳಿ, ದಾವಣಗೆರೆ ಜಿಲ್ಲೆ, ಖಾದಿ ಪ್ರಚಾರ, ಬಳ್ಳಾರಿ ಸಿದ್ದಮ್ಮ, ಇಜಾರಿ ವಸುಪಾಲಪ್ಪ.

**ಪೀಠಿಕೆ.**

ಸ್ವದೇಶಿ ಚಳುವಳಿ, ಬಂಗಾಳದಿಂದ ಪ್ರಾರಂಭವಾಗಿ ನಂತರ ದೇಶದ ತುಂಬೆಲ್ಲ ಹರಡಿತು. ಬಂಗಾಳದ ವಿಭಜನೆಯು ರಾಷ್ಟ್ರೀಯ ವಿಪತ್ತೆಂದು ಅನೇಕ ನಾಯಕರು ಭಾವಿಸಿದರು. ಲೋಕಮಾನ್ಯ ತಿಲಕರಂತೂ ಬಂಗಾಳ ವಿಭಜನೆಯನ್ನು ಉಗ್ರವಾಗಿ ಖಂಡಿಸಿದರು. ತಾವು ಹೋದ ಕಡೆಯೆಲ್ಲ ಸ್ವದೇಶಿ ವಸ್ತುಗಳ ಬಳಕೆ ಹಾಗೂ ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದೇ ಸ್ವರಾಜ್ಯ ಸಂಪಾದನೆಗೆ ಸಾಧನವೆಂದು ಜನತೆಗೆ ತಿಳಿಸಿ ಹೇಳುತ್ತಿದ್ದರು. ಇವರ ಪ್ರಭಾವ ಹರ್ಡೆಕರ ಮಂಜಪ್ಪನವರ ಮೇಲೆ ಬೀರಿತು. ಮರಾಠಿ ಪತ್ರಿಕೆಗಳಲ್ಲಿ ಪ್ರಕಟವಾದ ಲಾಲ್ಬಾಲ್ಪಾಲ್‌ರ ಭಾಷಣ ಹಾಗೂ ಲೇಖನಗಳನ್ನು ಮಂಜಪ್ಪನವರು ಕನ್ನಡಕ್ಕೆ ಅನುವಾದಿಸಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ದಾವಣಗೆರೆಯಿಂದ 1906ರ ಸೆಪ್ಟೆಂಬರ್ ತಿಂಗಳಲ್ಲಿ 'ಧನುರ್ಧಾರಿ' ಪತ್ರಿಕೆ ಪ್ರಕಟವಾಯಿತು. ದಾವಣಗೆರೆಯಲ್ಲಿ ಇವರು ಸ್ವಾತಂತ್ರ್ಯಕ್ಕಾಗಿ ಜನಗಳಲ್ಲಿ ಉತ್ಸಾಹ ತುಂಬಿ ಸಂಘಟನೆ ಮಾಡಿದರು. ಸ್ವದೇಶಿ ಚಳವಳಿ ಬಗ್ಗೆ ಜನರಿಗೆ ಮಾರ್ಗದರ್ಶನ ಮಾಡಿದರು. ಈ ಸಂದರ್ಭದಿಂದ ದಾವಣಗೆರೆ ಜಿಲ್ಲೆಯ ಜನತೆಯಲ್ಲಿ ಸ್ವಾತಂತ್ರ್ಯದ ಬಗ್ಗೆ ಉತ್ಸಾಹ ಮೂಡಿತು. ಅದು ಮುಂದೆ ಗಾಂಧೀಜಿಯವರ ಆಗಮನದಿಂದ ಇನ್ನಷ್ಟು ವ್ಯಾಪಕವಾಗಿ ಬೆಳೆಯಿತು.

ಬಂಗಾಳವನ್ನು ವಿಭಜಿಸಿದಾಗ ನಡೆದ ಸ್ವದೇಶಿ ಚಳುವಳಿಯ ಪ್ರಭಾವ ಕರ್ನಾಟಕದ ಮೇಲೂ ಆಯಿತು. ಧಾರವಾಡ, ಬೆಳಗಾವಿ, ಗದಗ, ಬಾಗಲಕೋಟೆ, ಕಿತ್ತೂರು ಮತ್ತು ದಾವಣಗೆರೆ ಮುಂತಾದ ಕಡೆ ಪ್ರತಿಭಟನಾ ಸಭೆಗಳು ನಡೆದವು. ಇದನ್ನೇ ಸ್ವದೇಶಿ ಆಂದೋಲನದ ಉಗಮ ಎಂದು ಕರೆಯಬಹುದು. ಹಲವು ಕಡೆ ರಾಷ್ಟ್ರೀಯ ಶಾಲೆಗಳನ್ನು ಆರಂಭಿಸಲಾಯಿತು. ವಿದೇಶಿ ವಸ್ತುಗಳ 'ಹೋಳಿ' ಸಭೆ ಮೆರವಣಿಗೆಗಳು 1921–22 ರಲ್ಲಿ ನಡೆದವು. ಆ ಸಂದರ್ಭದಲ್ಲಿ ಕರ್ನಾಟಕದ 70ಕ್ಕೂ ಹೆಚ್ಚು ಜನರು ಬಂಧಿತರಾದರು. ಆದರೂ ವಿದೇಶಿ ವಸ್ತುಗಳ ದಮನ ಕಾರ್ಯ ಮುಂದುವರೆದಿತ್ತು. ಈ ಹೋರಾಟದಲ್ಲಿ ಪಾಲ್ಗೊಂಡು ಹಾಗೂ ಸ್ವಾತಂತ್ರ್ಯ ಸಿಗುವವರೆಗೂ ಅದನ್ನು ಮುಂದುವರಿಸಿದ ಕೆಲವು ಪ್ರಮುಖ ನಾಯಕರ ಕುರಿತು ಇಲ್ಲಿ ಚರ್ಚಿಸಲಾಗಿದೆ.

**ದಾವಣಗೆರೆ ಜಿಲ್ಲೆಯಲ್ಲಿ ಸ್ವದೇಶಿ ಚಳುವಳಿ**

ಕೊಟಗಿ ಸಿದ್ಧಲಿಂಗಪ್ಪನವರು ಸ್ವದೇಶಿ ಚಳವಳಿ, ಅರಣ್ಯ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿ ಮತ್ತು ಮೈಸೂರು ಚಳವಳಿಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಹುಟ್ಟು ಹೋರಾಟಗಾರರಾದ ಸಿದ್ದಲಿಂಗಪ್ಪನವರು ಪತ್ರಿಕಾ ವೃತ್ತಿಯಲ್ಲಿ ನಾಲ್ಕು ಬಾರಿ ಸೆರೆಮನೆ ಕಂಡವರು. ಐದು ವರ್ಷಗಳ ಕಠಿಣ ಶಿಕ್ಷೆಗೆ ಗುರಿಯಾಗಿ, ಚಿತ್ರದುರ್ಗ, ಬೆಂಗಳೂರು, ತುಮಕೂರು ಮತ್ತು ಹಾಸನ ಸೆರೆಮನೆಗಳಲ್ಲಿ ಇವರನ್ನು ಇಡಲಾಗಿತ್ತು. ಒಂದು ವರ್ಷ ಸ್ಥಾನಬದ್ಧ ಕೈದಿಯಾಗಿ ಚಿಕ್ಕಮಗಳೂರು ಸೆರೆಮನೆಯಲ್ಲಿಡಲಾಗಿತ್ತು. ನಂತರ ಇವರನ್ನು ಜೈಲಿನಿಂದ ಬಿಡುಗಡೆ ಮಾಡಲಾಯಿತು.[1] ಮೊದಲಿನಿಂದಲೂ ಕಾಂಗ್ರೆಸ್ ಕಾರ್ಯಕರ್ತರಾಗಿ ಸಾರ್ವಜನಿಕ ಸಂಪರ್ಕವುಳ್ಳ ಇವರು 1930ರಿಂದ 1947ರವರೆಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡರು. ಇವರು ಬಾಪೂಜಿ ತತ್ವದಿಂದ ದೂರ ಸರಿದು ಸುಭಾಷರ ತತ್ವಪಾಲನೆಯನ್ನು ರೂಢಿಸಿಕೊಂಡರು. ಕೊಟ್ರೆನಂಜಪ್ಪ, ಇಟಗಿ ವೇದಮೂರ್ತಿ ಮುಂತಾದವರ ಸ್ನೇಹವೇ ಇದಕ್ಕೆ ಕಾರಣವಾಯಿತು. ಸ್ವತಃ ರಾಷ್ಟ್ರಗೀತೆಗಳನ್ನು ರಚಿಸಿ, ತಾವೇ ಹಾಡಿ ಜನರನ್ನು ಹೋರಾಟಕ್ಕೆ ಧುಮುಕುವಂತೆ ಪ್ರೇರೇಪಿಸುತ್ತಿದ್ದರು.[2]

19/01/1947 ರವರೆಗೆ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟದಲ್ಲಿ

ಪಾಲ್ಗೊಂಡ ಬಳ್ಳಾರಿ ಸಿದ್ದಮ್ಮನವರದು ಇನ್ನೊಂದು ಪ್ರಮುಖ ಹೆಸರು. ದಾವಣಗೆರೆಯಲ್ಲಿ ಇವರ ಮುಖಂಡತ್ವದಲ್ಲಿ 1932ರಲ್ಲಿ ಸ್ವದೇಶಿ ಚಳವಳಿ ಆರಂಭವಾಯಿತು. ವಿದೇಶಿ ವಸ್ತುಗಳ ದಹನ ಕಾರ್ಯವನ್ನು ಖಾದಿ ವಸ್ತ್ರಾಲಯ ಕಾರ್ಯಕರ್ತರು ಮಾಡಿದರು. ಪ್ರತಿಯೊಂದು ವಿದೇಶಿ ಬಟ್ಟೆಗಳ ಅಂಗಡಿಗಳ ಮುಂದುಗಡೆ ಪಿಕೆಟಿಂಗ್ ನಡೆಸಿದರು. ಇವರು ಸ್ವಯಂ ಪ್ರೇರಣೆಯಿಂದ ಸಮಾಜ ಸೇವಕರಾಗಿ ತೊಡಗಿಕೊಂಡಂತವರು. ಮಹಾತ್ಮ ಗಾಂಧೀಜಿಯವರ ಭೇಟಿ ಮತ್ತು ಸಲಹೆಗಳಿಂದ ಸ್ವದೇಶಿ ಚಳವಳಿಯಲ್ಲಿ ಪಾಲ್ಗೊಂಡರು.[3]

ಮೈಸೂರು ಕಾಂಗ್ರೆಸ್ ಸಮಿತಿಯ ವತಿಯಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ಸಂಚಾರ ಮಾಡಿದರು. ಹುಬ್ಬಳ್ಳಿಯಲ್ಲಿ ನಡೆದ ಕರ್ನಾಟಕ ಭಗಿನಿ ಮಂಡಳಿಯ ಅಧ್ಯಕ್ಷರು ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರೂ ಆಗಿದ್ದರು. 'ಮಾತೃ ಮಂದಿರ' ಅಥವಾ ಪ್ರಸೂತಿಗೃಹಗಳನ್ನು ತೆರೆದರು. ದಾವಣಗೆರೆ, ಹೆಬ್ಬಾಳಗಳಲ್ಲಿ ಮಾತೃ ಮಂದಿರವನ್ನು ಸ್ಥಾಪಿಸಿದರು. ಬಡ ಸ್ತ್ರೀಯರಿಗೆ ಸಹಾಯವಾದರು. ದಾವಣಗೆರೆಯಲ್ಲಿ ಮಹಿಳಾ ಸಮಾಜ ಸ್ಥಾಪಿಸಿದರು. ಅಪ್ಪಟ ಖಾದಿಧಾರಿಯಾಗಿದ್ದ ಶ್ರೀಮತಿ ಸಿದ್ದಮ್ಮನವರು 1938ರ ಏಪ್ರಿಲ್‌ನಲ್ಲಿ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ದಿಟ್ಟತನದಿಂದ ಪಾಲ್ಗೊಂಡ ಪ್ರಥಮ ಮಹಿಳೆ ಎನಿಸಿದರು.[4] ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬೃಹತ್ ಸಮಾವೇಶದಲ್ಲಿ ರಾಷ್ಟ್ರಧ್ವಜಾರೋಹಣ ಮಾಡಿ ಜೈಲುವಾಸ ಅನುಭವಿಸಿದರು. 1939ರ ಅರಣ್ಯ ಸತ್ಯಾಗ್ರಹ ಸಮಯದಲ್ಲಿ ಎಸ್. ನಿಜಲಿಂಗಪ್ಪನವರ ಜೊತೆಯಲ್ಲಿ ಭಾಗವಹಿಸಿ ಜೈಲು ಶಿಕ್ಷೆಗೆ ಒಳಗಾದರು. 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದ್ದರು. 1947ರಲ್ಲಿ ನಡೆದ ಮೈಸೂರು ಚಲೋ ಸತ್ಯಾಗ್ರಹದಲ್ಲಿದ್ದು, ಕೋರ್ಟ್ ಕಟ್ಟಡದ ಮೇಲೆ ಧ್ವಜ ಹಾರಿಸಿ, ಪ್ರವೇಶ ತಡೆ ಹಾಕಿದರು."[5]

ದಾವಣಗೆರೆಯಲ್ಲಿ ಖಾದಿಯನ್ನು ಪ್ರಚಾರ ಮಾಡಿದವರಲ್ಲಿ ಖಾದಿ ಸಿದ್ದಪ್ಪನವರು ಪ್ರಮುಖರು. ಖಾದಿ ಸಿದ್ದಪ್ಪನವರು ದಾವಣಗೆರೆಯಲ್ಲಿ ಮೊದಲ ಬಾರಿಗೆ ಸ್ವತಃ ಖಾದಿ ವಸ್ತ್ರಾಲಯ ಸ್ಥಾಪಿಸಿದರು. ನವಭಾರತ ಖಾದಿ ವಸ್ತ್ರಾಲಯ ಎಂದು ಅದಕ್ಕೆ ಹೆಸರಿಟ್ಟ ನಂತರ ಕೆ.ಎಸ್. ಸಿದ್ದಪ್ಪ ಎನ್ನುವ ಹೆಸರಿದ್ದ ಅವರು ಖಾದಿ ಸಿದ್ದಪ್ಪ ಎಂದೇ ಪರಿಚಿತರಾದರು. ಹರಿಜನ ಸೇವೆ, ಹಿಂದಿ ಪ್ರಚಾರ, ಸೇವಾದಳ, ಸರ್ವೋದಯ ಸೇವಾ ಕೆಲಸ, ವಿದೇಶಿ ವಸ್ತುಗಳ ಬಹಿಷ್ಕಾರ, ಖಾದಿಯ ಪ್ರಚಾರ ಮುಂತಾದ ಕೆಲಸ ಕಾರ್ಯಗಳಲ್ಲಿ ಇವರು ಸಕ್ರಿಯವಾಗಿ ತೊಡಗಿಕೊಂಡಿದ್ದರು. ಇವರು ಇತರ ಹೋರಾಟಗಾರರ ಜೊತೆ 1942ರಲ್ಲಿ ಮುಂಬೈನಲ್ಲಿ ಜರುಗಿದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡರು. ಪತ್ರಿಕಾ ರಂಗದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದ ಕೊಟಿಗಿ ಸಿದ್ಧಲಿಂಗಪ್ಪ ಮತ್ತು ಇಟಗಿ ವೇದಮೂರ್ತಿ ಅವರಿಗೆ ಪ್ರೋತ್ಸಾಹವನ್ನು ನೀಡಿ ಹುರಿದುಂಬಿಸಿದವರು ಖಾದಿ ಸಿದ್ಧಪ್ಪನವರು. ಸ್ವಾತಂತ್ರ್ಯ ಸಂಗ್ರಾಮ ಸಮಯದಲ್ಲಿ ಪೋಲಿಸರ ದಬ್ಬಾಳಿಕೆಗೆ ಹೆದರದೆ ಖಾದಿ ಸಿದ್ದಪ್ಪ ಒಂದು ವರ್ಷ ಕಠಿಣ ಶಿಕ್ಷೆ ಅನುಭವಿಸಿದರು.[6]

ಕಾಸಲ ಶ್ರೀನಿವಾಸ ಶೆಟ್ಟರು ದಾವಣಗೆರೆ ಜಿಲ್ಲೆಯಲ್ಲಿ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಇವರ ಹೋರಾಟ ಸ್ವದೇಶಿ ಚಳವಳಿಯಿಂದ ಆರಂಭವಾಗುತ್ತದೆ. ಸಮಾಜದ ದೀನದಲಿತರ ಮತ್ತು ದುರ್ಬಲ ಜನರ ಹಿತ ಸಾಧನೆಗಾಗಿ ಇಡೀ ಜೀವನವನ್ನು ಮುಡಿಪಾಗಿಟ್ಟರು. ರಾಷ್ಟ್ರೀಯ, ಸಾಮಾಜಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಶ್ರೀನಿವಾಸ ಶೆಟ್ಟರು ಪಟ್ಟಶ್ರಮ ಅಪಾರ. ಹೆಣ್ಣು ಮಕ್ಕಳ ಕ್ಷೇಮಾಭ್ಯುದಯಕ್ಕಾಗಿ ಶ್ರೀಮತಿ ಬಳ್ಳಾರಿ ಸಿದ್ದಮ್ಮನವರಿಗೆ ಬೆಂಬಲ ನೀಡಿದರು. ಹರಿಜನ ವಿದ್ಯಾರ್ಥಿ ನಿಲಯದ

ಉದ್ಘಾಟನೆಯನ್ನು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಹಸ್ತದಿಂದಲೇ ನೆರವೇರಿಸಿದ ಕೀರ್ತಿಗೆ ಕಾಸಲ ಶ್ರೀನಿವಾಸ ಶೆಟ್ಟರು ಪಾತ್ರರಾಗಿದ್ದರು. ಇವರು ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದರು. ಸ್ವದೇಶಿ ಚಳವಳಿಯಲ್ಲಿ ಭಾಗವಹಿಸಿ ಇವರ ಮುಖಂಡತ್ವದಲ್ಲಿ ವಿದೇಶಿ ವಸ್ತುಗಳ ದಹನ ಕಾರ್ಯ ನಡೆಯಿತು. ಅರಣ್ಯ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿ ಮತ್ತು ಮೈಸೂರು ಚಲೋ ಚಳವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.[7]

ದಾವಣಗೆರೆ ಜಿಲ್ಲೆಯಲ್ಲಿ ಸ್ವದೇಶಿ ಹೋರಾಟದ ಕುರಿತು ಬುಲೆಟಿನ್‌ಗಳ ಜನಜಾಗೃತಿ ಮೂಡಿಸಿದವರಲ್ಲಿ ಮಾಗಾನಹಳ್ಳಿ ಬಸವರಾಜಪ್ಪನವರು ಪ್ರಮುಖರು. ಬಸವರಾಜಪ್ಪನವರು ಮತ್ತು ಇಟಗಿ ವೇದಮೂರ್ತಿಯವರು ದಿನನಿತ್ಯ ಹರಪನಹಳ್ಳಿಗೆ ಬಂದು ಅಲ್ಲಿತ್ತ ಶಿವಾನಂದ ಪ್ರಿಂಟಿಂಗ್ ಪ್ರೆಸ್‌ನಿಂದ ಸಲಕರಣೆ ಪಡೆದು, ಅಲ್ಲಿ ಬುಲೆಟಿನ್ ತಯಾರಿಸಿಕೊಂಡು ದಾವಣಗೆರೆಗೆ ಬಂದು ಗುಪ್ತ ಪ್ರಚಾರವನ್ನು ಮಾಡುತ್ತಿದ್ದರು. ಈ ಗುಪ್ತ ಪ್ರಚಾರವೇ ಬಹಿರಂಗ ಹೋರಾಟಕ್ಕೆ ಜೀವ ತುಂಬುತ್ತಿದ್ದವು. ಬಸವರಾಜಪ್ಪ ಪೋಲಿಸರ ಕಣ್ಣಿಗೆ ಆಕಸ್ಮಿಕವಾಗಿ ಸಿಕ್ಕುಬಿಟ್ಟರು. ಇವರಿಗೆ ಎರಡು ತಿಂಗಳ ಶಿಕ್ಷೆಯನ್ನು ವಿಧಿಸಲಾಯಿತು. 193942 ರವರೆಗೆ 'ಸ್ವಾತಂತ್ರ್ಯ ಕಹಳೆ' ಮತ್ತು 'ಭಾರತ ಸಂದೇಶ' ಎನ್ನುವ ಬುಲೆಟಿನ್‌ಗಳ ಮೂಲಕ ಜನಜಾಗೃತಿಯನ್ನುಂಟು ಮಾಡಿದರು. ಸ್ವಾತಂತ್ರ್ಯ ಸಂಗ್ರಾಮಕ್ಕೆ ಜನರನ್ನು ಆಕರ್ಷಿತರನ್ನಾಗಿಸಲು ಗುಪ್ತ ಪ್ರಚಾರ ಮಾಡುತ್ತಿದ್ದರು. ಬಿ. ಮಲ್ಲಪ್ಪ ಮತ್ತು ಇಟಗಿ ವೇದಮೂರ್ತಿ ಇವರಿಬ್ಬರೂ ಬರಹಗಾರರಾಗಿದ್ದರು. ಮಗಾನಹಳ್ಳಿ ಬಸವರಾಜಪ್ಪ ಕಂಪೋಜ್ ಮತ್ತು ಹ್ಯಾಂಡ್ ಪ್ರಿಂಟ್ ಮಾಡುತ್ತಿದ್ದರು. ಈ ರೀತಿಯಾಗಿ ಇವರು ಬುಲೆಟಿನ್ ಮೂಲಕ ಸ್ವದೇಶಿ ಹಾಗೂ ಇನ್ನಿತರ ಚಳವಳಿಗಳಿಗೆ ಸ್ಫೂರ್ತಿ ತುಂಬಿದರು. ಇಜಾರಿ ವಸುಪಾಲಪ್ಪನವರು ಹರಪನಹಳ್ಳಿಯಲ್ಲಿ 1915ರಿಂದಲೇ ಸಾಮಾಜಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡರು. ಬಳ್ಳಾರಿ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದರು. ಶುಭ್ರವಿದ್ದ ಖಾದಿ ಬಿಳಿಬಟ್ಟೆಯ ಕುರ್ತಾ ಮಾದರಿಯ (ಶಿರವಾನಿ) ಕೋಟು ಹಾಗೂ ಗಜದ ಲಂಗಪಂಚೆ, ಗಾಂಧೀ ಟೋಪಿ, ಕೈಯಲ್ಲಿ ಬೆತ್ತ ಹಿಡಿದು ನಡೆಯುತ್ತಿದ್ದ ಅವರು ಗಾಂಧೀಜಿಯವರ ಶೈಲಿಯಲ್ಲಿ ಜೀವನ ನಡೆಸುತ್ತಿದ್ದರು. 1924ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೆ ಹರಪನಹಳ್ಳಿಯ ಡಾ. ರಾಮರಾಯರ ನೇತೃತ್ವದಲ್ಲಿ 30 ಜನ ಸ್ವಯಂಸೇವಕರನ್ನು ಕರೆದುಕೊಂಡು ಹೋಗಿದ್ದರು. ಅವರಲ್ಲಿ ಅರಳಿಕಟ್ಟೆ ಪೂರ್ಣಚಾರ್, ಚಿಗಟೇರಿ ಮುದೇನೂರು ಕೊಟ್ರಬಸಪ್ಪನವರು ಪ್ರಮುಖರು. ವಸುಪಾಲಪ್ಪನವರು ಸ್ವದೇಶಿ ಚಳವಳಿಯ ಬಗ್ಗೆ ಅನೇಕ ಜನರಿಗೆ ಮಾರ್ಗದರ್ಶನ ಮಾಡುತ್ತಿದ್ದರು.[8] ಮಹಾತ್ಮ ಗಾಂಧಿಯವರ ನೇತೃತ್ವದ ಪ್ರತಿಯೊಂದು ಚಳುವಳಿಯಲ್ಲಿ ತೊಡಗಿಸಿಕೊಂಡರಲ್ಲದೇ ಅನೇಕ ಜನರನ್ನು ಆ ಚಳುವಳಿಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿದರು. 1930 ರಲ್ಲಿ ಪಾನ ಪ್ರತಿಬಂಧಕ ಚಳುವಳಿಯ ಅಂಗವಾಗಿ ಈಚಲ ಮರಗಳನ್ನು ಕಡಿಯುವ ಚಳುವಳಿಯನ್ನು ಆರಂಭಿಸಿದರು. 1930ರಲ್ಲಿ ದೇಶದಾದ್ಯಂತ ಜರುಗಿದ ಈಚಲಮರ ಕಡಿಯುವ ಚಳವಳಿಯ ಅಂಗವಾಗಿ ಪ್ರಪ್ರಥಮವಾಗಿ 15.7.1930 ರಲ್ಲಿ ಹರಪನಹಳ್ಳಿ ತಾಲೂಕಿನ ಕಂಚಿಕೇರಿ ಗ್ರಾಮದಲ್ಲಿ ವಸುಪಾಲಪ್ಪನವರ ಮಾರ್ಗದರ್ಶನದಲ್ಲಿ ಕಂಚಿಕೇರಿ ಕೆಂಚಪ್ಪನ ಜಮೀನಿನಲ್ಲಿ ದಯಾನಂದರಾಜು, ಕೆ.ಬಿ. ಕುಲಕರ್ಣಿ, ಬಾಲಾಜಿ ಮತ್ತು ಶೆಟ್ರ ಚೂಡಪ್ಪ ಮುಂತಾದವರು ಈಚಲ ಗಿಡವನ್ನು ಕಡಿದರು. ಈಚಲ ಮರವನ್ನು ಕಡಿಯುವ ಚಳವಳಿಯು ಹರಪನಹಳ್ಳಿಯಲ್ಲಿ ಸಂಘಟಿತವಾಗಿ, ದಾವಣಗೆರೆ ಜಿಲ್ಲೆಯಾದ್ಯಂತ ವ್ಯಾಪಿಸಿತು.[9]

ಹರ್ಡೇಕರ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಹಾಗೂ ಇಜಾರಿ ವಸುಪಾಲಪ್ಪನವರ

ಮುಖಂಡತ್ವದಲ್ಲಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಯೋಧರನ್ನು ತರಬೇತಿ ಮಾಡುವ ಕಾರ್ಯ ಆರಂಭಗೊಂಡಿತು. 1932ರಲ್ಲಿ ಇವರ ಸಂಘಟನೆ ಮತ್ತು ಮಾರ್ಗದರ್ಶನದ ಪ್ರಭಾವದಿಂದ ಹರಪನಹಳ್ಳಿ ತಾಲೂಕಿನ ಕಣವಿಹಳ್ಳಿ ಗ್ರಾಮದಲ್ಲಿ ಪಟ್ವಾ ಜಮೀನಿನಲ್ಲಿ ಎ.ಬಿ. ಕುಲಕರ್ಣಿಯವರ ನೇತೃತ್ವದಲ್ಲಿ ಕಂಚಿನಕೋಟೆ ಬ್ರಹ್ಮಪ್ಪ, ಇಚಾರಿ ಶ್ರೀಧರಪ್ಪ, ಅರಳಿಕಟ್ಟೆ ಪೂರ್ಣಾಚಾರ್, ಶೆಟ್ರ ಚೂಡಪ್ಪ, ಕೊಪ್ಪಳ ರುದ್ರಪ್ಪ, ಬೆಣ್ಣೆಹಳ್ಳಿ ಬಸವಲಿಂಗಪ್ಪ, ಲಕ್ಕುಂಡಿ ಶಾಮರಾವ್ ಮತ್ತು ಬಿದರಹಳ್ಳಿ ಜಗನ್ನಾಥರಾವ್ ಇವರುಗಳು ಈಚಲಮರ ಕಡಿಯಲು ಹೋಗಿ ಬಂಧನಕ್ಕೊಳಗಾದರು. ಇವರಿಗೆ ಮೂರು ತಿಂಗಳ ಶಿಕ್ಷೆ ಮತ್ತು ದಂಡ ವಿಧಿಸಲಾಗಿತ್ತು. 1934ರಲ್ಲಿ ಹರಪನಹಳ್ಳಿಗೆ ಮಹಾತ್ಮಾ ಗಾಂಧೀಜಿಯವರು ಬಂದಾಗ ಭವ್ಯವಾಗಿ ಸ್ವಾಗತಿಸಿದರು. ಹರಿಜನೋದ್ಧಾರ ನಿಧಿಗೆ ಹಣ ಸಂಗ್ರಹಿಸುವಲ್ಲಿ ವಸುಪಾಲಪ್ಪನವರು ಪ್ರಮುಖ ಪಾತ್ರವಹಿಸಿದ್ದರು. ದಾವಣಗೆರೆ ಜಿಲ್ಲೆಯಲ್ಲಿ ಮಹಾತ್ಮಾ ಗಾಂಧೀಜಿಯವರ ತತ್ವಗಳನ್ನು ಬಿತ್ತಿದವರಲ್ಲಿ ಇವರು ಮೊದಲಿಗರು. ಹರಪನಹಳ್ಳಿಯು ಸ್ವಾತಂತ್ರ್ಯ ಸಂಗ್ರಾಮದಲ್ಲಿ ದಾವಣಗೆರೆ ಜಿಲ್ಲೆಗೆ ಕೇಂದ್ರಬಿಂದುವಾಗಿತ್ತು. 1942 ರಲ್ಲಿ ಆಂಗ್ಲರೇ ಭಾರತ ಬಿಟ್ಟು ತೊಲಗಿರಿ ಅಥವಾ ಕ್ವಿಟ್ ಇಂಡಿಯಾ ಚಳವಳಿಯು ಹರಪನಹಳ್ಳಿಯಲ್ಲಿ ವಸುಪಾಲಪ್ಪನವರ ಮುಖಂಡತ್ವದಲ್ಲಿ ಉಗ್ರವಾಗಿ ನಡೆಯಿತು. ವಸುಪಾಲಪ್ಪನವರು ಅಪ್ಪಟ ಗಾಂಧಿವಾದಿಯಾಗಿದ್ದರು. ಇವರ ಪೂರ್ವದಲ್ಲಿ ಯಾವ ಚಳುವಳಿಯೂ ಹರಪನಹಳ್ಳಿಯಲ್ಲಿ ನಡೆದಿರಲಿಲ್ಲ.[10]

ಕೇಶವರಾಯರು 1916ರಲ್ಲಿ ಗತಿಸಿದ ಗೋಪಾಲಕೃಷ್ಣ ಗೋಖಲೆಯವರ ಸ್ಮರಣಾರ್ಥವಾಗಿ ನಡೆದ ಶೋಕಸಭೆಯಲ್ಲಿ ಬಾಲಗಂಗಾಧರ ತಿಲಕರು ಮಾಡಿದ ಇಂಗ್ಲೀಷ್ ಭಾಷಣವನ್ನು ಕನ್ನಡಕ್ಕೆ ಅನುವಾದ ಮಾಡಿ ತಮ್ಮ ಸ್ನೇಹಿತರಿಗೆ ಹೇಳುತ್ತಿದ್ದರು. ಲಾಲಾ ಲಜಪತರಾಯ, ಪಂಡಿತ ಮದನಮೋಹನ ಮಾಳವೀಯ, ಬಿಪಿನ್ ಚಂದ್ರಪಾಲ್, ಗೋಖಲೆ ಮತ್ತು ತಿಲಕರು ಮುಂತಾದ ಅನೇಕ ರಾಷ್ಟ್ರನಾಯಕರ ಜೀವನ ಚರಿತ್ರೆಗಳನ್ನು ಇವರು ತರಿಸಿಕೊಂಡು ಓದುತ್ತಿದ್ದರು. ತಿಲಕರ ಧೈರ್ಯಸ್ಥೈರ್ಯ ದೇಶಭಕ್ತಿಗಳನ್ನು ವಿದ್ಯಾರ್ಥಿಗಳು ಅನುಸರಿಸುವಂತೆ ವಿನಂತಿಸಿದರು. 192329 ರವರೆಗೆ ಖಾದಿ ಉತ್ಪನ್ನ ಮತ್ತು ಪ್ರಚಾರ, ಗೋರಕ್ಷಣೆ, ಗೋಶಾಲೆ ಸ್ಥಾಪನೆ ಮುಂತಾದ ಕೆಲಸಕಾರ್ಯಗಳಲ್ಲಿ ತೊಡಗಿದ್ದರು. 1924ರ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಪ್ರತಿನಿಧಿಯಾಗಿ ಹೋಗಿದ್ದರು. ನಂತರ ಗಾಂಧೀಜಿಯವರ ದಂಡಿಯಾತ್ರೆ ಆರಂಭವಾದ ಕೂಡಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು. 1936ರಲ್ಲಿ ಹರಪನಹಳ್ಳಿಯಲ್ಲಿ ವಸುಪಾಲಪ್ಪನವರ ನೇತೃತ್ವದಲ್ಲಿ ಸಂಘಟನೆಯು ರಭಸದಿಂದ ನಡೆಯುತ್ತಿತ್ತು. ಬೆಣ್ಣೆಹಳ್ಳಿ ಬಸವಲಿಂಗಪ್ಪ, ಹಾಲಸಿದ್ದಪ್ಪ ಕೆ. ಗೌಡಪ್ಪನವರು ವಿದ್ಯಾರ್ಥಿಗಳ ಸಂಘಟನೆ ಕಾರ್ಯ ಕೈಗೊಂಡರು. ಕೇಶವರಾಯರು ಟಿ. ಸುಬ್ರಮಣ್ಯಂ ಮತ್ತು ವಿ.ಎಂ. ಗಿರಿಯವರೊಡನೆ ಸೇರಿಕೊಂಡು 'ಕರ್ನಾಟಕ ಕೇಸರಿ' ಎನ್ನುವ ವಾರಪತ್ರಿಕೆಯನ್ನು 193132ರಲ್ಲಿ ಬಳ್ಳಾರಿಯಿಂದ ಹೊರಡಿಸಿ ಸ್ವಾತಂತ್ರ್ಯ ಜ್ಯೋತಿ ನಂದದಂತೆ ಪ್ರಚಾರ ಮಾಡಿದರು. 1933 ಸೆಪ್ಟೆಂಬರ್ ತಿಂಗಳಲ್ಲಿ ಖಾದಿ ಮತ್ತು ಸ್ವದೇಶಿ ವಸ್ತು ಪ್ರದರ್ಶನವನ್ನು ಗಡಿನಾಡ ಗಾಂಧಿ ಖಾನ್ ಅಬ್ದುಲ್ ಗಫರ್ ಖಾನ್ ಸೊಸೆ ಸೋಫಿಯ ಸೋಮ್‌ಜಿ ನೆರವೇರಿಸಿದರು. ಇದರ ಪ್ರಭಾವದಿಂದ ಜಿಲ್ಲೆಯಲ್ಲಿ ಖಾದಿ ಮತ್ತು ಸ್ವದೇಶಿ ಹೆಚ್ಚಿನ ಪ್ರಚಾರವನ್ನು ಪಡೆದುಕೊಂಡಿತು.[11]

1942 ರಲ್ಲಿ ಆಂಗ್ಲರೇ ಭಾರತ ಬಿಟ್ಟು ತೊಲಗಿರಿ ಚಳವಳಿ ಆರಂಭವಾದಾಗ ಇವರು ಅನೇಕ ವಿಧ್ವಂಸಕ ಕೃತ್ಯಗಳನ್ನು ಮಾಡಿದರು. 1942 ರಲ್ಲಿ ಇವರನ್ನು ಬಂಧಿಸಿ ವೆಲ್ಲೂರಿಗೆ ಕರೆದೊಯ್ಯಲಾಯಿತು. ಒಂದು ವರ್ಷ ಎಂಟು ತಿಂಗಳ ನಂತರ ಇವರ ಬಿಡುಗಡೆಯಾಯಿತು.

ಹರಪನಹಳ್ಳಿಯಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನದ ಕೊನೆಯವರೆಗೂ ಇವರು ಹೋರಾಟ ಮಾಡಿದರು. ಇವರೊಂದಿಗೆ ಬಿ. ಅನಂತಚಾರ್, ಎ.ಹೆಚ್. ಶಿವಾನಂದ ಸ್ವಾಮಿ, ಬಣಗಾರ ಹೊನ್ನಪ್ಪ, ಮುದುಗಲ್ ನಾಗಪ್ಪ, ಇಜಾರಿ ಶಿರಸಪ್ಪ, ಕಟ್ಟೆ ಸೇತುರಾಮಾಚಾರ್, ಮುದೇನೂರು ಕೊಟ್ರಬಸಪ್ಪ, ಕೆ.ಎಸ್. ವೀರಪ್ಪ ಮತ್ತು ಶೆಟ್ರ ಪರಮೇಶ್ವರಪ್ಪ ಮುಂತಾದವರು ಸೇರಿಕೊಂಡು ಹರಪನಹಳ್ಳಿ ತಾಲೂಕಿನ ಸ್ವದೇಶಿ ಚಳವಳಿಯು ಚುರುಕಿನಿಂದ ನಡೆಯುವಂತೆ ಮಾಡಿದರು.[12]

ಶೆಟ್ರ ಚೂಡಪ್ಪನವರು 1924ರಲ್ಲಿ ಬೆಳಗಾವಿ ಕಾಂಗ್ರೆಸ್ಸಿನಲ್ಲಿ ದುಡಿದು ಅಲ್ಲಿಂದ ಜಿಲ್ಲೆಯ ಸಕಲ ರಾಷ್ಟ್ರೀಯ ಕಾರ್ಯಗಳಲ್ಲಿ ಭಾಗವಹಿಸಿದರು. 1930ರಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಮೂರು ತಿಂಗಳ ಕಠಿಣ ಶಿಕ್ಷೆ ಮತ್ತು 30 ರೂ. ದಂಡ ತೆತ್ತರು. ಬಳ್ಳಾರಿ ಸೆಂಟ್ರಲ್ ಜೈಲು ಮತ್ತು ಮದ್ರಾಸ್ ಜೈಲುಗಳಲ್ಲಿ ಜೈಲುವಾಸ ಅನುಭವಿಸಿ ಬಿಡುಗಡೆ ಹೊಂದಿದರು. 1932ರಲ್ಲಿ ಹರಪನಹಳ್ಳಿ ತಾಲೂಕಿನ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ನಿರ್ಬಂಧಿತ ಕರಪತ್ರ ಹಂಚಿದ್ದಕ್ಕೆ ಹೊಸಪೇಟೆ ನ್ಯಾಯಾಲಯದಲ್ಲಿ 6 ತಿಂಗಳು ಜೈಲು ಶಿಕ್ಷೆ ವಿಧಿಸಲಾಯಿತು. ಬಳ್ಳಾರಿ ಜೈಲಿನಲ್ಲೂ ಶಿಕ್ಷೆ ಅನುಭವಿಸಿದರು. ನಂತರ ಬಿಡುಗಡೆಯಾದ ಮೇಲೆ 1938ರಲ್ಲಿ ಹರಪನಹಳ್ಳಿಯಲ್ಲಿ ಖಾದಿ ಅಂಗಡಿಯನ್ನು ಸ್ಥಾಪಿಸಿದರು.

ಕೆ.ಎಂ. ಅಣಜಿಮಠರವರು ಬೆಳಗಾವಿ ಕಾಂಗ್ರೆಸ್ಸಿನ ವಿಚಾರಗಳನ್ನು ಪತ್ರಿಕೆಗಳಲ್ಲಿ ಓದಿ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದರು. ನಂತರ ಸ್ವದೇಶಿ ಚಳವಳಿ ಸೇರಿ ಪರದೇಶಿ ವಸ್ತುಗಳ ಬಹಿಷ್ಕಾರ ಚಟುವಟಿಕೆಯಲ್ಲಿ ಭಾಗವಹಿಸಿದರು. ಮುಂದೆ ಅರಣ್ಯ ಸತ್ಯಾಗ್ರಹ, ಸೇಂದಿ ಅಂಗಡಿ ಪಿಕೆಟಿಂಗ್‌ನಲ್ಲೂ ಭಾಗವಹಿಸಿದರು. ನಂತರ ಮುಂಬೈಗೆ ಹೋಗಿ 1930ರ ಮೇ ಯಲ್ಲಿ ವಡಾಲಾ ಉಪ್ಪಿನ ಸತ್ಯಾಗ್ರಹ ಶಿಬಿರದಲ್ಲಿ ಸೇರಿದರು. ಯೂಸುಫ್ ಮೆಹರಾಲಿ, ಎಸ್. ಕೆ. ಪಾಟೀಲ್, ಹಂಸಾ ಮೆಹ್ತಾ ಮುಂತಾದವರ ಆದೇಶದಂತೆ ಕೆಲಸ ಮಾಡಿದರು. ಈ ಸಮಯದಲ್ಲಿ 3 ತಿಂಗಳು ಶಿಕ್ಷೆ ಆಯಿತು. ಅಲ್ಲಿಂದ ಸಬರಮತಿ ಆಶ್ರಮಕ್ಕೆ ತೆರಳಿ ಖಾದಿ ಉತ್ಪಾದನೆಯಲ್ಲಿ ಮೂರು ತಿಂಗಳು ತರಬೇತಿ ಪಡೆದು 1936ರಲ್ಲಿ ಹರಿಹರಕ್ಕೆ ಮರಳಿ ಬಂದರು. 1939ರಲ್ಲಿ ಶಿವಪುರ ಧ್ವಜಸತ್ಯಾಗ್ರಹದಲ್ಲಿ ಭಾಗವಹಿಸಿ ಬಂಧಿತರಾಗಿದ್ದರು.[13] 1942ರಲ್ಲಿ ತಾಲೂಕಿನಲ್ಲೆಲ್ಲ ಅನೇಕ ಭೂಗತ ಹಾಗೂ ವಿಧ್ವಂಸಕ ಕೃತ್ಯಗಳಲ್ಲಿ ಭಾಗವಹಿಸಿದ್ದರು. 1947ರಲ್ಲಿ ತಾಲೂಕು ಕಚೇರಿಯ ಮೇಲೆ ಧ್ವಜ ಹಾರಿಸುವುದಾಗಿ ಪತ್ರ ಬರೆದಿದ್ದರು. ಆದರೆ ಅದರ ಹಿಂದಿನ ದಿವಸ ಇವರನ್ನು ಬಂಧಿಸಲಾಯಿತು. ಜೊತೆಯಲ್ಲಿ ಅಧ್ಯಕ್ಷರಾಗಿದ್ದ ಎಚ್. ಎಂ. ಕಾಶಿನಾಥಯ್ಯ, ಟಿ. ಜಯದೇವಪ್ಪ, ಎಂ. ಮಾಧವನಾಯಕ, ಕೆ. ದಶರಥಶಾಸ್ತ್ರಿ, ಎಂ. ನಾಗಭೂಷಣ, ಜಿ.ಎಂ. ಹನುಮಂತರಾವ್, ಕೆ. ನಂಜುಂಡಯ್ಯ, ಮುನಿಯಪ್ಪ, ಗೌಡ್ರ ಬಸಪ್ಪ ಮತ್ತು ಎಚ್. ವೀರಭದ್ರಪ್ಪ ಮುಂತಾದವರೂ ಇದ್ದರು. ಕೆ.ಎಚ್. ಮಹಾದೇವಪ್ಪನವರು ಚಿಕ್ಕವಯಸ್ಸಿನಲ್ಲಿ ಸ್ವದೇಶಿ ಚಳುವಳಿಯಲ್ಲಿ ಭಾಗವಹಿಸಿದರು. 1939 ರ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿ ಸ್ವಯಂಸೇವಕರಾಗಿ ಒಂದು ವಾರ ಕೆಲಸ ಮಾಡಿದರು. ಅಲ್ಲಿಂದ ದಾವಣಗೆರೆಯಲ್ಲಿ 1938ರಲ್ಲಿ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಹೆಂಡದಂಗಡಿ ಪಿಕೆಟಿಂಗ್, ಖಾದಿ ಪ್ರಚಾರ, ವಿದೇಶಿ ವಸ್ತುಗಳ ಬಹಿಷ್ಕಾರ, ಅರಣ್ಯ ಸತ್ಯಾಗ್ರಹಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಪಾಲ್ಗೊಂಡರು. ಹರಿಹರದಲ್ಲಿ ನಡೆದ ಮೈಸೂರು ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿ ಕೆಲಸ ಮಾಡಿದರು.[14] 1942 ರಲ್ಲಿ ಹರಿಹರದಲ್ಲಿ ದೂರವಾಣಿ ತಂತಿಗಳನ್ನು ಕತ್ತರಿಸಿದರು. ಈ ಸಮಯದಲ್ಲಿ ಮಹಾದೇವಪ್ಪ ಮತ್ತು ಅವರ ಸ್ನೇಹಿತ ಕೆ. ಚನ್ನವೀರಪ್ಪನವರನ್ನು ಬಂಧಿಸಲಾಯಿತು. ನಂತರ ಹರಿಹರದಲ್ಲಿ ರೈಲುಹಳಿಯನ್ನು ಕಿತ್ತಿದ್ದ

ಆರೋಪದ ಮೇಲೆ ಚಿತ್ರದುರ್ಗದಲ್ಲಿ ಆರು ತಿಂಗಳು ಬಂಧನದಲ್ಲಿಟ್ಟಿದ್ದರು.

ಟಿ.ಎನ್. ಓಬಳಪ್ಪ ಪಂಡಿತ್‌ರವರು ನಿಜಲಿಂಗಪ್ಪ, ಭೀಮಪ್ಪ ನಾಯಕ, ವಾಸುದೇವರೆಡ್ಡಿ ಮತ್ತು ದೊಗ್ಗನಾಳಿನ ಕೊಟ್ರನಂಜಪ್ಪ ಮುಂತಾದ ಕೆಲವು ನಾಯಕರುಗಳ ಜೊತೆ ಸೇರಿ ಸ್ವಾತಂತ್ರ್ಯ ಚಳವಳಿಯ ಬಗ್ಗೆ ಸಭೆ ಸೇರಿಸಿ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಿದರು. ಓಬಳಪ್ಪ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯಾಗಿದ್ದರು. ಹಳ್ಳಿಗರಲ್ಲಿ ಜವಾಬ್ದಾರಿ ಸರಕಾರದ ಧೋರಣೆಗಳ ಪ್ರಚಾರ ಮಾಡುತ್ತಿದ್ದರು. ತಾಲೂಕು ಕಾಂಗ್ರೆಸ್ ಸಮ್ಮೇಳನವನ್ನು ಆಗಿನ ಕಾಂಗ್ರೆಸ್ ಅಧ್ಯಕ್ಷ ಎಚ್.ಸಿ. ದಾಸಪ್ಪನವರ ನೇತೃತ್ವದಲ್ಲಿ ನಡೆಯಿತು. 101 ಜೋಡಿ ಎತ್ತು ಹೂಡಿ ಮೂರು ಮೈಲು ದೂರದಿಂದ ಅಧ್ಯಕ್ಷರ ಮೆರವಣಿಗೆ ಮಾಡಿದರು. ಈ ಸಮಾರಂಭಕ್ಕೆ ಸುತ್ತಲ ಹಳ್ಳಿಯಿಂದ ಸುಮಾರು 12 ಸಾವಿರ ಜನ ಬಂದಿದ್ದರು. ಅವರಿಗೆ ಸ್ವದೇಶಿ ಚಳುವಳಿಯ ಮಹತ್ವದ ಕುರಿತು ತಿಳಿಸಲಾಯಿತು. ಸೇಂದಿ ಅಂಗಡಿ ಪಿಕೆಟಿಂಗ್‌ನ್ನು ಸುಮಾರು 4 ತಿಂಗಳ ಕಾಲ ಒಂದು ದಿನವೂ ಬಿಡದೆ ನಡೆಸಲಾಯಿತು.[15] ಆ ಸಂದರ್ಭದಲ್ಲಿ ಪೋಲಿಸರಿಂದ ವಿಪರೀತ ಕಿರುಕುಳ ಆಯಿತು. ನಂತರ ಎಂ. ಹನುಮಂತಪ್ಪ, ಹನುಮಂತರೆಡ್ಡಿ, ವಿರೂಪಣ್ಣ ಹನುಮಂತಪ್ಪ ಇವರ ಜೊತೆಯಲ್ಲಿ ಒಂದು ತಂಡವನ್ನು ಸಂಘಟಿಸಿ ಇವರ ಮುಂದಾಳತ್ವದಲ್ಲಿ ಬಾಗನಾಳು ಎಂಬ ಹಳ್ಳಿಯ ಬಳಿ ಈಚಲಮರ ಕಡಿಯುತ್ತಿದ್ದ ಸಮಯದಲ್ಲಿ ಇವರನ್ನು ಬಂಧಿಸಲಾಯಿತು. ಅಲ್ಲಿಂದ ಚಿತ್ರದುರ್ಗಕ್ಕೆ ಒಯ್ಯುವಾಗ, ದಾರಿಯಲ್ಲಿ ಈಚಲ ಹಗ್ಗ ಕಟ್ಟಿ ಇವರನ್ನು ಪೋಲಿಸರ ಬೆತ್ತದಿಂದ ಹೊಡೆಯುತ್ತ ಎಳೆದು ತಂದರು. ಏಳು ದಿನ ರಿಮ್ಯಾಂಡ್ ಆದ ಮೇಲೆ ಒಂದು ವರ್ಷ ಕಠಿಣ ಶಿಕ್ಷೆ, 100 ರೂ. ದಂಡ ಆಯಿತು. ಬಿಡುಗಡೆ ಆದ ನಂತರ 1942ರಲ್ಲಿ ಭೂಗತ ಚಟುವಟಿಕೆಗಳಲ್ಲಿ ಕೆಲಸ ಮಾಡಿದರು. 1947ರಲ್ಲಿ ಬಂಧಿತನಾಗದೆ ಚಳುವಳಿಯಲ್ಲಿ ಕೆಲಸ ಮಾಡಿದರು. ಭೂಗತ ಕಾರ್ಯಗಳಲ್ಲಿ ಬ್ರಿಟಿಷ್ ಸರಕಾರಕ್ಕೆ ಹೆದರದೆ ಹೋರಾಟ ಮಾಡಿದರು.[16]

ಸ್ವದೇಶಿ ಚಳುವಳಿಯನ್ನು ಸಂಘಟಿಸಿದ ಲೋಕೇಶ್ವರಪ್ಪನವರು ಚಳುವಳಿ ಪ್ರಾರಂಭವಾದಾಗ ಸತ್ಯಾಗ್ರಹ ಸಮಿತಿಯ ಗುಂಪನ್ನು ಹೊನ್ನಳ್ಳಿಯ ಪ್ರತಿಯೊಂದು ಹಳ್ಳಿಹಳ್ಳಿಗಳಲ್ಲಿ ಸ್ವದೇಶಿ ಚಳುವಳಿಯ ಬಗ್ಗೆ ಪ್ರಚಾರಕ್ಕೆಂದು ಕಳುಹಿಸಿದರು. ಈ ಸಮಯದಲ್ಲಿ ಟೆಲಿಗ್ರಾಂ ಸಂಪರ್ಕ ಇಲ್ಲದಂತೆ ಮಾಡಲು ತಂತಿ ಕತ್ತರಿಸಿ, ತಂತಿಯ ಸುರುಳಿ ಸಹಿತ ಹಿಂದಿರುಗುತ್ತಿದ್ದರು. ಅಂತಹ ಸಮಯದಲ್ಲಿ ಪೋಲಿಸರು ಅವರನ್ನು ಬಂಧಿಸಿ, 20 ಮೈಲು ದೂರದ ಕಾಡಿನಲ್ಲಿ ಬಿಟ್ಟು ಬಂದರು. ಅಲ್ಲಿಂದ ದಾರಿಯಲ್ಲಿ ಬರುವ ಎಲ್ಲ ಹಳ್ಳಿಗಳಲ್ಲೂ ಸ್ವದೇಶಿ ಚಳುವಳಿಯ ಬಗ್ಗೆ ಪ್ರಚಾರ ಮಾಡುತ್ತ ಊರಿಗೆ ಮರಳಿದರು. ನ್ಯಾಮತಿ ಮಾಧ್ಯಮಿಕ ಶಾಲೆಯ ಸೈಕ್ಲೋಸ್ಟೈಲ್ ಯಂತ್ರ ಅಪಹರಿಸಿ, ಅದನ್ನು ಕರಪತ್ರ ತಯಾರಿಸಲು ಬಳಸಿಕೊಂಡರು. ಆ ಸಮಯದಲ್ಲಿ ಅವರನ್ನು ಇನ್ನೊಮ್ಮೆ ಬಂಧಿಸಿ ಶಿಕಾರಿಪುರ ರಸ್ತೆಯ ಅರಣ್ಯದಲ್ಲಿ ಇಡಲಾಯಿತು.[17] ಆ ಸಂದರ್ಭದಲ್ಲಿ ಟಯರುಗಳಿಗೆ ಮೊಳೆ ಹೊಡೆದು ಬಸ್ಸು ಚಲಿಸದಂತೆ ಮಾಡಿ ಹೊನ್ನಾಳಿ ಕಡೆ ನಡೆದು ಬಂದರು. ಕಾಗಿನೆಲೆ ಎಂಬ ಗ್ರಾಮಕ್ಕೆ ಮಿಲಿಟರಿ ಬರಲಿದೆಯೆಂದು ತಿಳಿದು, ಆ ಊರಿಗೆ ಸಮೀಪದ ಆಯಕಟ್ಟಿನ ಸೇತುವೆ ನಾಶಮಾಡಿ ಸಂಚಾರ ಸಂಪರ್ಕ ಕಡಿದು ಹಾಕಿದರು. ಹೊನ್ನಾಳಿ ತಾಲೂಕು ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ ಖಾದಿ ಪ್ರಚಾರದ ಚಟುವಟಿಕೆ ನಡೆಸಿದರು. ಖಾದಿ ಉತ್ಪಾದನೆಯಲ್ಲಿ ಪೂರ್ಣ ಅನುಭವ ಪಡೆಯಲು 1946 ರಲ್ಲಿ ಬದನವಾಳ ಕೇಂದ್ರದಲ್ಲಿ ತರಬೇತಿ ಪಡೆದರು. ಖಾದಿಯ ಮಹತ್ವದ ಕುರಿತು ಜನರಿಗೆ ತಿಳಿಸಲಾಯಿತು.[18]

ಈ ರೀತಿಯಾಗಿ ದಾವಣಗೆರೆ ಜಿಲ್ಲೆಯಾದ್ಯಂತ ಈ ಚಳುವಳಿ ವ್ಯಾಪಿಸಿತು. ವಿದೇಶಿ

ವಸ್ತುಗಳನ್ನು ಬಹಿಷ್ಕರಿಸಿ, ಸುಟ್ಟು ಹಾಕಲಾಯಿತು. ವಿದೇಶಿ ಬಟ್ಟೆಗಳನ್ನು ಯಾರೂ ಉಪಯೋಗಿಸಬಾರದು, ಕೇವಲ ಸ್ವದೇಶಿ ಬಟ್ಟೆಗಳನ್ನು ಮಾತ್ರ ಉಪಯೋಗಿಸಬೇಕೆಂದು ಜನರಲ್ಲಿ ಮನವಿ ಮಾಡಲಾಯಿತು. ದಾವಣಗೆರೆ ಜಿಲ್ಲೆಯಾದ್ಯಂತ ಪ್ರತಿ ಹಳ್ಳಿಹಳ್ಳಿಗೂ ಚಳವಳಿಗಾರರು ಹೋಗಿ ಖಾದಿ ಬಗ್ಗೆ ಪ್ರಚಾರ ಮಾಡಿದರು. ಪ್ರತಿಯೊಬ್ಬರು ಖಾದಿ ಬಟ್ಟೆಯನ್ನು ಧರಿಸಬೇಕು, ವಿದೇಶಿ ವಸ್ತುಗಳನ್ನು ತಿರಸ್ಕರಿಸಬೇಕು ಎಂಬುದು ಸ್ವದೇಶಿ ಚಳುವಳಿಗಾರರ ಮಂತ್ರವಾಗಿತ್ತು.[19] ಈ ಚಳುವಳಿಯಲ್ಲಿ ಮೇಲೆ ಹೆಸರಿಸಿದವರಷ್ಟೇ ಅಲ್ಲದೆ ಇನ್ನೂ ಹಲವಾರು ನಾಯಕರು ಪಾಲ್ಗೊಂಡರು. ಅವರುಗಳೆಂದರೆ, ದಾವಣಗೆರೆ ತಾಲೂಕಿನಿಂದ ಕೆ.ಟಿ. ಜಂಬಣ್ಣ, ಇಬ್ರಾಹಿಂ ಸಾಬ್, ಓಂಕಾರಪ್ಪ, ಕೆ.ಹೆಚ್. ರಂಗನಾಥ್, ಕೆ. ಆರ್. ಪಾಂಡುರಂಗರಾವ್, ಗೌಡರ ಸಿದ್ದಮ್ಮ, ಮಲ್ಲಪ್ಪ ಡಿ.ಎನ್. ಅಡಿವೆಪ್ಪ, ಹಳ್ಳೂರು ನಾಗಪ್ಪ ಮತ್ತು ರಾಚಯ್ಯ ಮಳಿಮಠ, ಹರಿಹರ ತಾಲೂಕಿನ ಸ್ವದೇಶಿ ಚಳುವಳಿಯ ರೂವಾರಿಗಳು ಪ್ರಮುಖರಾದವರು ಎಸ್. ನೀಲಪ್ಪ, ಎಂ.ಜಿ. ಕೊಟ್ರಪ್ಪ, ಕೆ. ಹಾಲಪ್ಪ ಮತ್ತು ಸಿದ್ದಪ್ಪ, ಜಗಳೂರು ತಾಲೂಕಿನಿಂದ ಜಿ. ರುದ್ರಮುನಿಯಪ್ಪ, ಡಿ. ರುದ್ರಪ್ಪ, ಟಿ. ಸಿದ್ಧಬಸಪ್ಪನಾಯಕ, ಜಿ. ನಾಗಮ್ಮ, ಪುಟ್ಟಮ್ಮ, ಎಸ್. ಕೃಷ್ಣರೆಡ್ಡಿ ಮತ್ತು ಚಂದ್ರಶೇಖರಪ್ಪ, ಚನ್ನಗಿರಿ ತಾಲೂಕಿನಿಂದ ಕತ್ತಲಗೆರೆ ರುದ್ರಪ್ಪ, ಎಲ್. ಸಿದ್ದಪ್ಪ, ಎಚ್. ಗುರುಮೂರ್ತಪ್ಪ, ಕುಂದೂರು ರುದ್ರಪ್ಪ, ಬಿ.ಜಿ. ನಾರಾಯಣಶೆಟ್ಟಿ, ಎಸ್. ಲಕ್ಷ್ಮೀಪತಿ ಮತ್ತು ಸೋಮಣ್ಣ ಶೆಟ್ಟಿ, ಹರಪನಹಳ್ಳಿ ತಾಲೂಕಿನಿಂದ ಅಕ್ಕಸಾಲಿ ಭಾಸ್ಕರಪ್ಪ, ಪದ್ಮಜ್ಜಿ ಸಿದ್ದಪ್ಪ, ಬೆಳ್ಳುಳ್ಳಿ ಚನ್ನಬಸಪ್ಪ, ಹೊನ್ನಾಳಿ ಹೆಚ್.ವಿ. ರಂಗಪ್ಪ ಮತ್ತು ಹೊನ್ನಾಳಿ ಸಿ. ಈಶ್ವರಪ್ಪ ಪ್ರಮುಖರು.[20]

**ಕೊನೆಯ ಟಿಪ್ಪಣಿಗಳು:**

1. ಬುರ್ಲಿ ಬಿಂದುಮಾಧವ್ ' ಭಾರತೀಯ ಸ್ವಾತಂತ್ರ್ಯದ ಹೆಜ್ಜೆಗಳು ' 1939, ಮಿಂಚಿನ ಬಳ್ಳಿ ಕಾರ್ಯಾಲಯ ಧಾರವಾಡ, ಪು ಸಂ 105
2. ರಾಘವೇಂದ್ರನಾಯ್ಕ, 2016, ಹೋಂ ರೂಲ್ ಮತ್ತು ಸ್ವದೇಶಿ ಚಳುವಳಿ ವಿಜಯಪುರ ಜಿಲ್ಲೆ, ರಚನಾ ಪ್ರಕಾಶನ. ಪು ಸಂ 152
3. ಆಲೂರ್ ವೆಂಕಟರಾವ್ 'ನನ್ನ ಜೀವನ ಸ್ಮೃತಿಗಳು', ಪ್ರಕಾಶಕರು ಜಯ ಕರ್ನಾಟಕ ಕಾರ್ಯಾಲಯ, ಧಾರವಾಡ, ಪು ಸಂ 346
4. ಅದೇ ಪು 346
5. ಎ ಬಿ ವಗ್ಗರ, 2017, ಸ್ವದೇಶಿ ಚಳುವಳಿಯಲ್ಲಿ ಪೈಸಾ ಫಂಡ್ ಪಾತ್ರ, ಇತಿಹಾಸ ದರ್ಶನ ಸಂ32, ಪು ಸಂ 2
6. ಬಿ ಷೇಕ್ ಅಲಿ (ಸಂ), ಪ್ರೊ ಎಸ್ ಚಂದ್ರಶೇಕರ್ ' ಕನ್ನಡ ಚರಿತ್ರೆ ' ಸಂ7, ಕನ್ನಡ ವಿಶ್ವವಿದ್ಯಾಲಯ ಹಂಪಿ ಪು ಸಂ 345
7. ಶ್ರೀ ಸಿದ್ದವ್ವನಹಳ್ಳಿ ಕೃಷ್ಣ ಶರ್ಮ, ಗಾಂಧಿ ಮತ್ತು ಕರ್ನಾಟಕ, ಮೈಸೂರು ರಾಜ್ಯ ಗಾಂಧೀ ಸ್ಮಾರಕ ನಿಧಿ, ಗಾಂಧೀಭವನ, ಬೆಂಗಳೂರು, 1970, ಪು ಸಂ 255
8. ಟಿ. ಗಿರಿಜ, ದಾವಣಗೆರೆ : ಇದು ನಮ್ಮ ಜಿಲ್ಲೆ, ನಿಹಾರಿಕಾ ಪ್ರಕಾಶನ, ದಾವಣಗೆರೆ, 2001, ಪು ಸಂ 145
9. ಅದೇ ಪು145
10. ಟಿ. ಗಿರಿಜ, ಚಿತ್ರದುರ್ಗ ಜಿಲ್ಲಾದರ್ಶಿನಿ, ರೇಖಾ ಪ್ರಕಾಶನ, ದಾವಣಗೆರೆ, 1991, ಪು ಸಂ 65
11. ಈಚನೂರು ಶಾಂತ, ಮಹಾತ್ಮ ಗಾಂಧೀಜಿ, ಪೃಥ್ವಿ ಪ್ರಕಾಶನ, ಬೆಂಗಳೂರು, 1996, ಪು ಸಂ 125
12. ಅದೇ ಪು 125

13. ಸೂರ್ಯನಾಥ ಯು. ಕಾಮತ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ3, ಕರ್ನಾಟಕ ರಾಜ್ಯ ಸರಕಾರದ ಪ್ರಕಟಣೆ, ಬೆಂಗಳೂರು, 1985, ಪು ಸಂ 305
14. ಅದೇ ಪು 305
15. ಅದೇ ಪು 306
16. ಮೋ.ಕ. ಗಾಂಧಿ, (ಅನು.), ಸ್ವಾ.ರಾ. ಕುಲಕರಣಿ, ನನ್ನ ಕಲ್ಪನೆಯ ಸಮಾಜವಾದ, ಭಾರತೀಯ ವಿದ್ಯಾಭವನ, ಬೆಂಗಳೂರು, 1987ಪು ಸಂ 295
17. ಅದೇ ಪು, 296
18. ಅದೇ ಪು 296
19. ಅದೇ ಪು 297
20. ಪಿ.ಎಸ್. ನಾರಾಯಣರಾವ್, ಕರ್ನಾಟಕದಲ್ಲಿ ಗಾಂಧೀಜಿ ಪ್ರಭಾವ, ಐಬಿಎಚ್ ಪ್ರಕಾಶನ, ಬೆಂಗಳೂರು, 1980, ಪು ಸಂ 98

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.